**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಪ್ರಾಸಾ- 18

ಚಾಸಾ-31

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಸ್ಮಿತಾ ಜಿ. |
| ಗಂಡನ ಹೆಸರು | : | ಶಿವಮೂರ್ತಿ ಎಸ್. |
| ವಯಸ್ಸು | : | 46 ವರ್ಷ |
| ವೃತ್ತಿ | : | ಸೀನಿಯರ ಸೈಂಟಿಫಿಕ್ ಆಫೀಸರ, FSL ಬೆಂಗಳೂರು, |
| ವಾಸ | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 08-10-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**(ವಿಡಿಯೋ ಕಾನ್ಫರೆನ್ಸ್ ಮುಖಾಂತರ)**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

1. ನಾನು 2014 ರಿಂದ 2019 ರವರೆಗೆ ಸೈಂಟಿಫಿಕ್ ಆಫೀಸರ್ ಆಗಿ ಆರ್.ಎಫ್.ಎಸ್.ಎಲ್., ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈಗ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಆರ್.ಎಫ್.ಎಸ್.ಎಲ್., ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ಎಂ.ಎಸ್.ಸಿ., ಪಿ.ಹೆಚ್.ಡಿ., ವ್ಯಾಸಂಗ ಮಾಡಿದ್ದು, 2014 ರಲ್ಲಿ ಆರ್.ಎಫ್.ಎಸ್.ಎಲ್., ಪ್ರಯೋಗಾಲಯಕ್ಕೆ ಸೇರಿದ್ದು, ಡೈರೆಕ್ಟರೇಟ್ ಆಫ್ ಫಾರೆನ್ಸಿಕ್ ಸೈನ್ಸ್ ನಲ್ಲಿ ಬೆಂಗಳೂರಿನಲ್ಲಿ ತರಬೇತಿ ಪಡೆದಿರುತ್ತೇನೆ. ನಾನು ಈವರೆಗೆ ಸುಮಾರು 300 ಪ್ರಕರಣಗಳಲ್ಲಿ ವರದಿ ನೀಡಿದ್ದು, ಸುಮಾರು **50** ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ.

3. ದಿನಾಂಕಃ 03-09-2020 ರಂದು ನಮ್ಮ ಕಛೇರಿಯ ಸ್ವಾಗತ ವಿಭಾಗದವರು ಮೊಕದಮ್ಮೆ ಸಂಖ್ಯೆಃ 152/2019 ಗೆ ಸಂಬಂಧಿಸಿದ 3 ಸೀಲಾದ ವಸ್ತುಗಳನ್ನು ಸೋಮವಾರಪೇಟೆ ಪೊಲೀಸ್ ಠಾಣೆಯ, ಪೊಲೀಸ್ ಪೇದೆ, ಅರುಣ್ ಕುಮಾರ್ ಕೆ.ಆರ್., ಪಿಸಿ-35 ರವರಿಂದ ಸ್ವೀಕರಿಸಲಾಗಿದ್ದು, ಸದರಿ ವಸ್ತುಗಳನ್ನು ಸ್ವೀಕರಿಸಿ ಅದಕ್ಕೆ RFSL/BS/576/2020 ರಂತೆ ನಂಬರ್ ನೀಡಿ ಅವುಗಳನ್ನು ಜೀವಶಾಸ್ತ್ರ ವಿಭಾಗಕ್ಕೆ ಪರೀಕ್ಷೆಗಾಗಿ ಕಳುಹಿಸಿದ್ದರು. ಸದರಿ ವಸ್ತುಗಳ ಮೇಲೆ ಇದ್ದ ಸೀಲುಗಳು ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿದ್ದವು ಮತ್ತು ಸೀಲುಗಳು ಸುಸ್ಥಿತಿಯಲ್ಲಿ ಇದ್ದವು. ಸದರಿ 3 ವಸ್ತುಗಳನ್ನು ಪರೀಕ್ಷಿಸಿದು, ಅವುಗಳ ವಿವರ ಈ ಕೆಳಗಿನಂತೆ ಇರುತ್ತದೆ.

ವಸ್ತು ಸಂಖ್ಯೆ-1 Jacket, ವಸ್ತು ಸಂಖ್ಯೆ-2 ಒಂದು ಟಿ-ಶರ್ಟು, ವಸ್ತು ಸಂಖ್ಯೆ-3 ಒಂದು ಜೀನ್ಸ್ ಪ್ಯಾಂಟ್ ಇದ್ದವು.

ಮೇಲೆ ಹೇಳಿದ ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆ ಒಳಪಡಿಸಿದಾಗ, ನನ್ನ ವರದಿಯನ್ನು ಈ ಕೆಳಕಂಡಂತೆ ನೀಡಿರುತ್ತೇನೆ.

ವಸ್ತು ಸಂಖ್ಯೆ : 1, 2 ಮತ್ತು 3 ರಕ್ತದ ಕಲೆಗಳು ಕಂಡು ಬಂದಿರುತ್ತದೆ. ವಸ್ತು ಸಂಖ್ಯೆ: 1, 2 ಮತ್ತು 3 ರಕ್ತದ ಕಲೆಗಳುಗಳು ಮನುಷ್ಯನದ್ದಾಗಿರುತ್ತದೆ ಮತ್ತು ಮನುಷ್ಯನ ರಕ್ತದ ಗುಂಪಿಗೆ ಸೇರಿದ ರಕ್ತದ ಕಲೆಗಳು ಆಗಿದ್ದು, ಅದು 'O' ಗುಂಪಿಗೆ ಸೇರಿದ್ದಾಗಿರುತ್ತದೆ.

4. ನನ್ನ ಪರೀಕ್ಷೆಗೆ ಸಂಬಂಧಿಸಿದಂತೆ ಸಹಿ ಮಾಡಿರುವ ವರದಿಯನ್ನು ನೀಡಿರುತ್ತದೇನೆ. ಸದರಿ ವರದಿಯನ್ನು ನಾನು ನೀಡಿದ ವರದಿ ಆಗಿದ್ದು, ನಿಪಿ-20 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಗಿದೆ. ಪರೀಕ್ಷೆಯಾದ ನಂತರ ಸದರಿ ವಸ್ತುಗಳನ್ನು ಮರುಪ್ಯಾಕ್

ಮಾಡಿ ಕಛೇರಿಯ ಮಾದರಿ ಸೀಲಿನೊಂದಿಗೆ ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ ನಾನು ನೋಡುತ್ತಿರುವ ಮಾದರಿ ನಾನು ಕಳುಹಿಸಿದ್ದ ಸೀಲು ಆಗಿದ್ದು ಅದನ್ನು ನಿಪಿ-21 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

5. ನಾನು ಪರೀಕ್ಷಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಸದರಿ ವಸ್ತುಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.-2 ರಿಂದ ಮು.ಮಾ-4 ಎಂದು ಗುರುತಿಸಲಾಗಿದೆ.

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ., ವಕೀಲರಿಂದ:</u>**

6. Jacket ಡಾರ್ಕ್ ಚಾಕೊಲೇಟ್ ಬ್ರೌನ್ ಕಲರ್ ಆಗಿತ್ತು. ಟಿ-ಶರ್ಟಿನ ಬಣ್ಣ half white ಆಗಿತ್ತು. ಒಂದು circular opining jacket ಮತ್ತು ಟಿ-ಶರ್ಟಿನಲ್ಲಿ ಕಂಡು ಬಂದಿರುತ್ತದೆ. ಸದರಿ ಟಿ-ಶರ್ಟಿನಲ್ಲಿ ಬೇರೆ ಯಾವುದಾದರೂ ಡಿಸೈನ್ ಇತ್ತೊ, ಇಲ್ಲವೋ ಎಂದು ನನ್ನ observation ನಲ್ಲಿ ನಾನು ಬರೆದುಕೊಂಡಿಲ್ಲ. ರಕ್ತದ ಕಲೆಗಳ ಪ್ರಾಯವನ್ನು ನಾನು ನೋಡಿಲ್ಲ. ಬಟ್ಟೆಯಲ್ಲಿ ಇರುವ ರಕ್ತದ ಕಲೆಗಳು ಒಂದು ವರ್ಷದ ಮೇಲೆ ಆಗಿದ್ದರೆ ಅವುಗಳ content ಗಳು ಹೋಗಿ ಬಿಡುತ್ತವೆ ಎಂದರೆ ಸರಿಯಲ್ಲ. ರಕ್ತದ ಉಪಗುಂಪನ್ನು ತನಿಖಾಧಿಕಾರಿಗಳು ಕೇಳಿದ ಕಾರಣ ನಾನು ಅದನ್ನು ಬರೆದಿರುವುದಿಲ್ಲ. ಗಾಯಾಳುವಿನ ರಕ್ತವನ್ನು ನನಗೆ ಕಳುಹಿಸಿಕೊಟ್ಟಿಲ್ಲ. ‘O’ ಗುಂಪಿನ ರಕ್ತಗಳು ಬೇಕಾದಷ್ಟು ಸಿಗುತ್ತವೆ ಎಂದರೆ ಸರಿ. ಗಾಯಾಳುವಿನ ರಕ್ತವನ್ನು ಕಳುಹಿಸಿ ಕೊಡದಕಾರಣ ನಾನು ಪರೀಕ್ಷೆ ಮಾಡಿದ ರಕ್ತದ ಕಲೆಗಳು ಯಾರಿಗೆ ಸೇರಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನನಗೆ ಕಳುಹಿಸಿದ್ದ ವಸ್ತುಗಳಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇದೆ ಎಂದು ಉಲ್ಲೇಖಿಸಿದ್ದೇನೆ ಹೊರತು ಯಾವ ಯಾವ ಭಾಗದಲ್ಲಿ ರಕ್ತದ ಕಲೆಗಳು ಇದ್ದವು ಎಂದು ಉಲ್ಲೇಖಿಸಿಲ್ಲ. ನನ್ನ format ಪ್ರಕಾರ ನಾನು ರಕ್ತದ ಕಲೆಗಳ ಬಗ್ಗೆ ವಿವರ

ನೀಡಿದ್ದೇನೆ. ನನ್ನ ಬಳಿಗೆ ಯಾವುದೇ ವಸ್ತುಗಳು ಪರೀಕ್ಷೆಗಾಗಿ ಬಂದಿಲ್ಲ ಮತ್ತು ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ,

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.